ದೂರವಾಣಿ: 080-2220 4452
ಫ್ಯಾಕ್ಸ್ : 080-2225 2144

Website: www.karnatakapower.com.

# ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

CIN No.U85110KA1970 SGC001919

"ಶಕ್ತಿಭವನ" # 82,
ರೇಸ್ ಕೋರ್ಸ್ ರೋಡ್,
ಬೆಂಗಳೂರು - 560 001.

ಸಂಖ್ಯೆ:ಎ1 ಪಿ1 ಎ/1661

ದಿನಾಂಕ:24.07.2019

## ಅಧಿಸೂಚನೆ

ವಿಷಯ: ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಎಲ್ಲಾ ಉದ್ಯೋಗಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಬಿಡುಗಡೆಗೊಳಿಸುವ - ಕುರಿತು.

ಉಲ್ಲೇಖ: ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ರವರ ಪತ್ರ ಸಂಖ್ಯೆ: ಸಿಆಸುಇ 186 ಸೇನೆನಿ 2018 ದಿನಾಂಕ: 15.05.2019.

***

ಮಾನ್ಯ ಸರ್ವೋಚ್ಚ ನ್ಯಾಯಾಲಯ ದಿನಾಂಕ:10.05.2019ರಂದು ನೀಡಿರುವ ತೀರ್ಪಿನಂತೆ, ಕರ್ನಾಟಕ [ರಾಜ್ಯ ಸರ್ಕಾರದ ಸಿವಿಲ್ ಸೇವೆಯಲ್ಲಿನ] ಹುದ್ದೆಗಳಿಗೆ ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ-2017ನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪುರಸ್ಕರಿಸಿ ತೀರ್ಪು ನೀಡಿದ್ದು, ಸದರಿ ತೀರ್ಪಿನಂತೆ ಕ್ರಮ ಕೈಗೊಳ್ಳಲು ಉಲ್ಲೇಖಿತ ಆದೇಶದಲ್ಲಿ ಕೆಲವೊಂದು ಮಾರ್ಗಸೂಚಿಗಳನ್ನು ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018 ದಿನಾಂಕ: 15.05.2019 ರಲ್ಲಿ ದಿನಾಂಕ: 27.04.1978 ರಿಂದ ಅನ್ವಯಿಸುವಂತೆ ಜೇಷ್ಠತಾ ಪಟ್ಟಿಯನ್ನು ತಯಾರಿಸಿ, ಅರ್ಹತಾ ದಿನಾಂಕಗಳನ್ನು ನಿಗದಿಪಡಿಸುವ, ಮುಂಬಡ್ತಿಗಳನ್ನು ಪುನಾರಾವಲೋಕನೆ ಮಾಡುವ ಪ್ರಕ್ರಿಯೆಯನ್ನು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ನಂತರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ತಿಳಿಸಿದ್ದು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿನ ತಾಂತ್ರಿಕ/ತಾಂತಿಕೇತರ ಮತ್ತು ಕಾರ್ಮಿಕ ವೃಂದದ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ದಿನಾಂಕ: 27.04.1978 ರಿಂದ ದಿನಾಂಕ: 15.05.2019 ರವರೆಗಿನ ಉದ್ಯೋಗಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಜೇಷ್ಠತಾ ಪಟ್ಟಿಯನ್ನು ನಿಗಮದ ವೆಬ್-ಸೈಟ್‌ನಲ್ಲಿ ಬಿಡುಗಡೆಗೊಳಿಸಲಾಗಿದೆ.

ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಒಂದು ತಿಂಗಳ ಕಾಲಾವಕಾಶವನ್ನು ನೀಡಲಾಗಿದ್ದು, ಆಕ್ಷೇಪಣೆಗಳನ್ನು ಸಲ್ಲಿಸಬಯಸುವವರು ಇದರೊಂದಿಗೆ ಪ್ರಕಟಿಸಿರುವ ಅನುಬಂಧ-'ಎ'ರಲ್ಲಿ ತಿಳಿಸಿರುವ ಸೂಚನೆಗಳನ್ವಯ ನೇರವಾಗಿ, ನಿರ್ದೇಶಕರು (ಮಾನವ ಸಂಪನ್ಮೂಲ), ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ನಂ:82, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು - 560 001 ರವರಿಗೆ ದಿನಾಂಕ:22.08.2019 ರ ಒಳಗಾಗಿ ತಲುಪುವಂತೆ ಪೂರಕ ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿದೆ. ದಿನಾಂಕ:23.08.2019ರ ನಂತರ ಸ್ವೀಕೃತಗೊಂಡ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಮುಂದುರೆದಿದೆ...2

ಮೇಲ್ಕಂಡಂತೆ, ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಿದಲ್ಲಿ ಅಂತಹ ಆಕ್ಷೇಪಣೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ನಿಗಮದ ವೆಬ್-ಸೈಟ್ www.karnatakapower.comನಲ್ಲಿ ಪ್ರಕಟಿಸಲಾಗುವುದು.

"ವ್ಯ.ನಿ. ರವರಿಂದ ಅನುಮೋದಿಸಲ್ಪಟ್ಟಿದೆ"

ವ್ಯವಸ್ಥಾಪಕ ನಿರ್ದೇಶಕರ ಪರವಾಗಿ,

ಪ್ರತಿ: ತಾಂತ್ರಿಕ ನಿರ್ದೇಶಕರು/ಹಣಕಾಸು ನಿರ್ದೇಶಕಕರು.
: ಎಲ್ಲಾ ಕಾರ್ಯನಿರ್ವಾಹಕ ನಿರ್ದೇಶಕರು.
: ಯೋಜನಾ ಮುಖ್ಯಸ್ಥರು.
: ಎಲ್ಲಾ ಮುಖ್ಯ ಅಭಿಯಂತರು ಮತ್ತು ತತ್ಸಮಾನ.
: ಎಲ್ಲಾ ಅಧೀಕ್ಷಕ ಅಭಿಯಂತರು ಮತ್ತು ತತ್ಸಮಾನ.
; ಎಲ್ಲಾ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ತತ್ಸಮಾನ.
: ಎಲ್ಲಾ ಸಿಬ್ಬಂದಿ ಅಧಿಕಾರಿ ಮತ್ತು ಲೆಕ್ಕಾಧಿಕಾರಿಗಳು.

: ಅಧ್ಯಕ್ಷರು/ಕಾರ್ಯದರ್ಶಿ
ಕೆಪಿಸಿ ಜಿಇಎ/ಎಂಇಎ/ಸಿಇಎ/ಐ&ಸಿ ಇಂಜಿನಿಯರ್ಸ್ ಅಸೋಷಿಯೇಷನ್
ಕೆಪಿಸಿ ಇಂಜಿನಿಯರಿಂಗ್ ಜಿಯೋಲಾಜಿಸ್ಟ್ ಅಸೋಸಿಯೇಷನ್
ಕೆಪಿಸಿ ಪೋಸ್ಟ್ ಗ್ರಾಜುಯೇಟ್ ಕೆಮಿಸ್ಟ್ ಅಸೋಸಿಯೇಷನ್/ಕೆಪಿಸಿ ಡಿಇಎ.
ಕೆಪಿಸಿ ಆಫೀಸರ್ಸ್ ಯೂನಿಯನ್/ಕೆಪಿಸಿ ಕಾರ್ಪೋರೇಟ್ ಅಸೋಸಿಯೇಷನ್
ಕೆಪಿಸಿಇಯು/ಆರ್‌ಟಿಪಿಎಸ್‌ಇಯು/ಕೆಪಿಸಿ ಮಜ್ದೂರ್ ಸಂಘ/
ಕೆಪಿಸಿ ಎಸ್‌ಸಿ/ಎಸ್‌ಟಿ ಅಸೋಷಿಯೇಷನ್.